**ದಿನಾಂಕ: 21-11-2020 ರಂದು ವಾರ್ಡ್ ಸಂಖ್ಯೆ 197 ವಸಂತಪುರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.**

***ಹಾಜರಿದ್ದ ಸಮಿತಿ ಸದಸ್ಯರು:-***

1. ಶ್ರೀ ಮಹದೇಶ್, ಹೆಚ್.ಎಸ್- ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ಕಾರ್ಯಪಾಲಕ ಅಭಿಯಂತರರು ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ ಬೊಮ್ಮನಹಳ್ಳಿ ವಲಯ
2. ಶ್ರೀ ಜಗದೀಶ್ ರಾವ್ ವಾಡೆ-ಸದಸ್ಯರು
3. ಶ್ರೀ ಎನ್.ಆರ್.ಸೋಮಶೇಖರ್ -ಸದಸ್ಯರು
4. ಶ್ರೀ ಮಹಾಬಲೇಶ್ವರ್-ಸದಸ್ಯರು
5. ಶ್ರೀ ಬಿ.ಎಸ್.ರಾಜೇಶ್-ಸದಸ್ಯರು
6. ಶ್ರೀ ರಮೇಶ್.ಬಿ.ಕೆ-ಸದಸ್ಯರು
7. ಶ್ರೀ ಕುಮಾರಸ್ವಾಮಿ-ಸದಸ್ಯರು
8. ಶ್ರೀಮತಿ ಸುಜಾತ.ಎಸ್.ಪ್ರಸಾದ್-ಸದಸ್ಯರು

***ಹಾಜರಿದ್ದ ಅಧಿಕಾರಿಗಳು:-***

1. ಶ್ರೀ ನರೇಂದ್ರ ಕುಮಾರ್.ಎ – ಸಹಾಯಕ ಅಭಿಯಂತರರು ಮತ್ತು ಸಂಚಾಲಕರು (ವಾರ್ಡ್ 197 ವಸಂತಪುರ)
2. ಶ್ರೀ ಮಹೇಶ್ – ಕಿರಿಯ ಆರೋಗ್ಯ ಪರಿವೀಕ್ಷಕರು
3. ಶ್ರೀಮತಿ ಸುಷ್ಮಾ.ಎಸ್ – ಸಹಾಯಕ ಅಭಿಯಂತರರು-ಕೆರೆಗಳು
4. ಶ್ರೀ ಕಿರಣ್ – ಸಹಾಯಕ ಅಭಿಯಂತರರು, ಬೆಸ್ಕಾಂ,

ಮೇಲೆ ಹಾಜರಿದ್ದ ಸಮಿತಿ ಸದಸ್ಯರ ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರಾದ ಶ್ರೀ ಮಹದೇಶ್, ಹೆಚ್.ಎಸ್ ಕಾರ್ಯಪಾಲಕ ಅಭಿಯಂತರರು ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು, ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ, ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಸದರಿ ಸಭೆಯಲ್ಲಿ ಈ ಕೆಳಕಂಡಂತೆ ವಿವಿಧ ವಿಷಯಗಳ ಬಗ್ಗೆ ವಾರ್ಡ್ ಸಮಿತಿಯು ವಿವರವಾಗಿ ಚರ್ಚಿಸಿದಂತೆ ಮುಂದಿನ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿ / ಇಲಾಖೆಗಳಿಗೆ ಸೂಚಿಸಲಾಗಿರುತ್ತದೆ.

1. ಸಿಂಗಾಪುರ ಗಾರ್ಡನ್ 1ನೇ ಮತ್ತು 3ನೇ ಹಂತದಲ್ಲಿ ಸಮರ್ಪಕವಾಗಿ ಘನತ್ಯಾಜ್ಯ ವಿಲೇವಾರಿಯಾಗುತ್ತಿರುವುದಿಲ್ಲ ಹಾಗೂ ಮನೆ ಮನೆಗಳಿಂದ ತ್ಯಾಜ್ಯವನ್ನು ಸಂಗ್ರಹಣೆಯಾಗುತ್ತಿಲ್ಲವೆಂದು ಸಾರ್ವಜನಿಕರು ದೂರಿರುತ್ತಾರೆ. ಈ ಸಂದರ್ಭದಲ್ಲಿ ಆರೋಗ್ಯ ಪರಿವೀಕ್ಷಕರು ಪ್ರಸ್ತುತ ವಾರ್ಡಿನಲ್ಲಿ ಈಗ ಟೆಂಡರ್ ಅನುಮೋದನೆಗೊಂಡು ಕಾರ್ಯಾದೇಶವಾಗಿದ್ದು, ಹಂತ ಹಂತವಾಗಿ ಬ್ಲಾಕ್ ಸ್ಪಾಟ್ ಮತ್ತು ಹೆಚ್ಚುವರಿ ಘನತ್ಯಾಜ್ಯವನ್ನು ವಿಲೇವಾರಿ ಮಾಡಲಾಗುವುದು ಎಂದು ತಿಳಿಸಿರುತ್ತಾರೆ.
2. ವಿ.ವಿ.ನಗರ, ನಾರಾಯಣನಗರ 1ನೇ, 3ನೇ ಬ್ಲಾಕ್ ಮತ್ತು ಮುನಿರೆಡ್ಡಿ ಲೇಔಟ್‌ನಲ್ಲಿ ಬೀದಿ ದೀಪಗಳ ತೊಂದರೆ ಇದ್ದು, ಹೆಚ್ಚುವರಿ ಬೀದಿ ದೀಪಗಳನ್ನು ಅಳವಡಿಸಲು ಸಾರ್ವಜನಿಕರು ತಿಳಿಸಿರುತ್ತಾರೆ. ಸದರಿ ವಿಷಯಕ್ಕೆ ಶ್ರೀ ರಮೇಶ್ ಸಹಾಯಕ ಅಭಿಯಂತರರು ಈಗಾಗಲೇ ಟೆಂಡರ್ ಕರೆಯಲಾಗಿದ್ದು, ಸರ್ವೆ ಪೂರ್ಣಗೊಂಡ ನಂತರ ಹೆಚ್ಚುವರಿ ವಿದ್ಯುತ್ ದೀಪಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ.
3. ಗುಬ್ಬಲಾಳ ಕನಕಪುರ ಮುಖ್ಯರಸ್ತೆ ಜಂಕ್ಷನ್‌ನಲ್ಲಿ ಬೆಸ್ಕಾಂ ನವರು ರಸ್ತೆ ಅಗೆದಿದ್ದು ಮತ್ತು ಟ್ರಾನ್ಸ್‌ಫರ್‌ಮರ್ ದುರಸ್ಥಿಗೊಂಡಿರುತ್ತದೆ ಎಂದು ಸಾರ್ವಜನಿಕರು ತಿಳಿಸಿರುತ್ತಾರೆ. ಸದರಿ ವಿಷಯಕ್ಕೆ ಶ್ರೀ ರಮೇಶ್ ಸಹಾಯಕ ಅಭಿಯಂತರರು ಕೂಡಲೇ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ.
4. ನಾರಾಯಣನಗರ 3ನೇ ಬ್ಲಾಕ್‌ನ 100 ಅಡಿ ರಸ್ತೆಯಲ್ಲಿ ಟೀ ಅಂಗಡಿಯನ್ನು ತೆರವುಗೊಳಿಸಲು ಅಲ್ಲಿನ ಸಾರ್ವಜನಿಕರು ದೂರಿರುತ್ತಾರೆ. ಈ ಸಂಬಂಧ ಮಾನ್ಯ ಅಧ್ಯಕ್ಷರು ಕೂಡಲೇ ಕ್ರಮ ಕೈಗೊಳ್ಳಲು ಆರೋಗ್ಯ ವೈದ್ಯಾಧಿಕಾರಿಗಳು ಬೊಮ್ಮನಹಳ್ಳಿ ವಲಯ ರವರಿಗೆ ಸೂಚಿಸಿರುತ್ತಾರೆ. 11ನೇ ಅಡ್ಡರಸ್ತೆಯಲ್ಲಿ ಬೃಹತ್ ಮಳೆ ನೀರು ಗಾಲುವೆಯಲ್ಲಿ ಹೂಳು ತುಂಬಿಕೊಂಡಿರುತ್ತದೆ ಎಂದು ದೂರಿರುತ್ತಾರೆ. ಈ ಬಗ್ಗೆ ಕ್ರಮ ಕೈಗೊಳ್ಳಲು ಕಾರ್ಯಪಾಲಕ ಅಭಿಯಂತರರು ಬೃಹತ್

Scanned with CamScanner

ಮಳೆ ನೀರು ಗಾಲುವೆ ರವರಿಗೆ ಕ್ರಮ ವಹಿಸಲು ಸೂಚಿಸಿರುತ್ತಾರೆ. 100 ಅಡಿ ರಸ್ತೆಯಲ್ಲಿ ರಸ್ತೆಯನ್ನು ಸಮತಟ್ಟ ಮಾಡಲು ಮತ್ತು ಚರಂಡಿಯಲ್ಲಿ ಹೂಳು ತುಂಬಿಕೊಂಡಿರುತ್ತದೆ ಎಂದು ಸಾರ್ವಜನಿಕರು ದೂರಿರುತ್ತಾರೆ. ಈ ಬಗ್ಗೆ ಕ್ರಮ ಕೈಗೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು ಉತ್ತರಹಳ್ಳಿ ಉಪವಿಭಾಗ ರವರಿಗೆ ಕ್ರಮ ವಹಿಸಲು ಸೂಚಿಸಿರುತ್ತಾರೆ. ಬೆಸ್ಕಾಂ ರವರು ಹೆಚ್.ಡಿ ಕೇಬಲ್ ಅಳವಡಿಸಲು ರಸ್ತೆಯನ್ನು ಅಗೆದಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುತ್ತದೆ ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಕೋಣನಕುಂಟೆ ರವರಿಗೆ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಲಾಗಿರುತ್ತದೆ.

5. ವಿ.ವಿ.ನಗರ 1ನೇ ಹಂತದಲ್ಲಿ ಬೀದಿ ದೀಪಗಳ ತೊಂದರೆ ಇದ್ದು, ಹೆಚ್ಚುವರಿ ಬೀದಿ ದೀಪಗಳನ್ನು ಅಳವಡಿಸಲು ಸಾರ್ವಜನಿಕರು ತಿಳಿಸಿರುತ್ತಾರೆ. ಸದರಿ ವಿಷಯಕ್ಕೆ ಶ್ರೀ ರಮೇಶ್ ಸಹಾಯಕ ಅಭಿಯಂತರರು ಈಗಾಗಲೇ ಟೆಂಡರ್ ಕರೆಯಲಾಗಿದ್ದು, ಸರ್ವೆ ಪೂರ್ಣಗೊಂಡ ನಂತರ ಹೆಚ್ಚುವರಿ ವಿದ್ಯುತ್ ದೀಪಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ. ಸಮರ್ಪಕವಾಗಿ ಘನತ್ಯಾಜ್ಯ ವಿಲೇವಾರಿಯಾಗುತ್ತಿರುವುದಿಲ್ಲ ಹಾಗೂ ಮನೆ ಮನೆಗಳಿಂದ ತ್ಯಾಜ್ಯವನ್ನು ಸಂಗ್ರಹಣೆಯಾಗುತ್ತಿಲ್ಲವೆಂದು ಸಾರ್ವಜನಿಕರು ದೂರಿರುತ್ತಾರೆ. ಈ ಕುರಿತು ಶ್ರೀ.ಮಹೇಶ್. ಕಿರಿಯ ಆರೋಗ್ಯ ಪರಿವೀಕ್ಷಕ ರವರು ಹೊಸ ಗುತ್ತಿಗೆದಾರರನ್ನು ನೇಮಿಸಲಾಗಿದ್ದು, ಕೂಡಲೇ ವಿಲೇವಾರಿ ಮಾಡಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು. ಸದರಿ ಪ್ರದೇಶದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿರುತ್ತದೆ ಎಂದು ದೂರಿದ್ದು, ಕೂಡಲೇ ಕ್ರಮ ಕೈಗೊಳ್ಳಲು ಪಶುಸಂಗೋಪನೆ ವಿಭಾಗ ರವರಿಗೆ ಸೂಚಿಸಿರುತ್ತಾರೆ.

6. ಸಾರ್ವಭೌಮನಗರ 2ನೇ ಮುಖ್ಯರಸ್ತೆ 2ನೇ ಅಡ್ಡರಸ್ತೆಯಲ್ಲಿ ಕಲ್ವರ್ಟ್ ರಿಪೇರಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಟ್ಟಿಂಗ್ ಆಗಿರುತ್ತದೆ ಎಂದು ಅಲ್ಲಿನ ಸಾರ್ವಜನಿಕರು ದೂರಿರುತ್ತಾರೆ. ಈ ಸಂಬಂಧ ಮಾನ್ಯ ಅಧ್ಯಕ್ಷರು ಕೂಡಲೇ ಕ್ರಮ ಕೈಗೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು ಉತ್ತರಹಳ್ಳಿ ಉಪವಿಭಾಗ ರವರಿಗೆ ತಿಳಿಸಿರುತ್ತಾರೆ.

7. ನಾರಾಯಣನಗರ 1ನೇ ಬ್ಲಾಕ್‌ನಲ್ಲಿ ಡಬಲ್ ರೋಡ್ ರಸ್ತೆಯಲ್ಲಿ ವೀಡ್ಸ್ ಬೆಳೆದುಕೊಂಡಿದ್ದು ಮತ್ತು ಎ2ಬಿ ಮುಂಭಾಗದಲ್ಲಿ ಬಳಿ ಸಮರ್ಪಕವಾಗಿ ಘನತ್ಯಾಜ್ಯ ವಿಲೇವಾರಿಯಾಗುತ್ತಿರುವುದಿಲ್ಲ ಸಾರ್ವಜನಿಕರು ದೂರಿರುತ್ತಾರೆ. ಈ ಸಂದರ್ಭದಲ್ಲಿ ಆರೋಗ್ಯ ಪರಿವೀಕ್ಷಕರು ಪ್ರಸ್ತುತ ವಾರ್ಡಿನಲ್ಲಿ ಈಗ ಟೆಂಡರ್ ಅನುಮೋದನೆಗೊಂಡು ಕಾರ್ಯಾದೇಶವಾಗಿದ್ದು, ಹಂತ ಹಂತವಾಗಿ ಬ್ಲಾಕ್ ಸ್ಪಾಟ್ ಮತ್ತು ಹೆಚ್ಚುವರಿ ಘನತ್ಯಾಜ್ಯವನ್ನು ವಿಲೇವಾರಿ ಮಾಡಲಾಗುವುದು ಎಂದು ತಿಳಿಸಿರುತ್ತಾರೆ. ಸದರಿ ಪ್ರದೇಶದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿರುತ್ತದೆ ಎಂದು ದೂರಿದ್ದು, ಕೂಡಲೇ ಕ್ರಮ ಕೈಗೊಳ್ಳಲು ಪಶುಸಂಗೋಪನೆ ವಿಭಾಗ ರವರಿಗೆ ಸೂಚಿಸಿರುತ್ತಾರೆ.

8. 2ನೇ ಮುಖ್ಯರಸ್ತೆಯಲ್ಲಿ ಆಟೋ ಮತ್ತು ದ್ವಿಚಕ್ರವಾಹನಗಳನ್ನು ಸಾಲಾಗಿ ಸಾರ್ವಜನಿಕರು ಪಾರ್ಕಿಂಗ್ ಮಾಡುತ್ತಿರುವುದರಿಂದ ಸಾರ್ವಜನಿಕರ / ವಾಹನ ಸವಾರರ ಸಂಚಾರಕ್ಕೆ ಬಹಳ ತೊಂದರೆಯಾಗಿರುತ್ತದೆ ಎಂದು ಸಮಿತಿ ಸದಸ್ಯರು ತಿಳಿಸಿರುತ್ತಾರೆ. ಅದಕ್ಕೆ ಮಾನ್ಯ ಪಾಲಿಕೆ ಸದಸ್ಯರು ಕೂಡಲೇ ಟ್ರಾಫಿಕ್ ಪೋಲೀಸ್ ನವರಿಗೆ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರಾದ ಶ್ರೀ ಮಹದೇಶ್.ಹೆಚ್.ಎಸ್ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಶ್ರೀ ಮಹದೇಶ್.ಹೆಚ್.ಎಸ್
ಅಧ್ಯಕ್ಷರು ಹಾಗೂ ಕಾರ್ಯಪಾಲಕ ಅಭಿಯಂತರರು
ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ
ಬೊಮ್ಮನಹಳ್ಳಿ ವಲಯ

ಶ್ರೀ ನರೇಂದ್ರ ಕುಮಾರ್.ಎ
ಸಂಚಾಲಕರು ಹಾಗೂ ಸ.ಅ-197

ಪ್ರತಿಯನ್ನು:-

1. ಜಂಟಿ ಆಯುಕ್ತರು ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು ಬೆಂಗಳೂರು-ದಕ್ಷಿಣ ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.

Scanned with CamScanner